# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ–೪ಎ<br>**Part – IVA** | ಬೆಂಗಳೂರು, ಬುಧವಾರ, ೧೭, ಡಿಸೆಂಬರ್,೨೦೨೫ ( ಮಾರ್ಗಶಿರಾ,೨೬, ಶಕವರ್ಷ, ೧೯೪೭)<br>**BENGALURU, WEDNESDAY, 17, DECEMBER, 2025 (MARGASHIRA, 26, SHAKAVARSHA, 1947)** | ನಂ.೮೨೦<br>**No. 820** |


**ಕರ್ನಾಟಕ ವಿಧಾನಸಭೆ**

**ಹದಿನಾರನೇ ವಿಧಾನಸಭೆ**

**ಎಂಟನೇ ಅಧಿವೇಶನ**

## ಕರ್ನಾಟಕ ಅನುಸೂಚಿತ ಜಾತಿಗಳ (ಉಪ-ವರ್ಗೀಕರಣ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–89)**

ಶಿಕ್ಷಣ ಮತ್ತು ಉದ್ಯೋಗದಲ್ಲಿ ಏಕೀಕೃತ ಮತ್ತು ಏಕರೂಪದ ಪ್ರಗತಿಯನ್ನು ಖಚಿತಪಡಿಸಿಕೊಳ್ಳಲು ಕರ್ನಾಟಕ ರಾಜ್ಯದಲ್ಲಿನ ಅನುಸೂಚಿತ ಜಾತಿಗಳ ಉಪ-ವರ್ಗೀಕರಣಕ್ಕಾಗಿ ಉಪಬಂಧ ಕಲ್ಪಿಸಲು ಒಂದು ವಿಧೇಯಕ.

ಕರ್ನಾಟಕ ರಾಜ್ಯದಲ್ಲಿ ಅನುಸೂಚಿತ ಜಾತಿಗಳ ಪ್ರವರ್ಗದಡಿಯಲ್ಲಿ ನೂರ ಒಂದು (101) ಅನುಸೂಚಿತ ಜಾತಿಗಳಿದ್ದು, ಮತ್ತು ರಾಜ್ಯ ಸರ್ಕಾರವು ಸಾರ್ವಜನಿಕ ವಲಯದ ಉದ್ಯೋಗ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಈ ಸಮುದಾಯಗಳಿಗೆ 17% ಮೀಸಲಾತಿಯನ್ನು ವಿಸ್ತರಿಸಿರುತ್ತದೆ. ಭಾರತದ ಸಂವಿಧಾನದ ರಾಜ್ಯ ನೀತಿಯ ನಿದೇ ಶನಾತ್ಮಕ ತತ್ವಗಳ (ಭಾಗ IV) ಅನುಚ್ಛೇದ 46ರ ಅನುಸಾರ, ರಾಜ್ಯ ಸರ್ಕಾರವು ಅನುಸೂಚಿತ ಜಾತಿಗಳ ಹಿತಾಸಕ್ತಿಗಳನ್ನು ರಕ್ಷಿಸಲು ಮತ್ತು ಸಾಮಾಜಿಕ ನ್ಯಾಯವನ್ನು ಕಲ್ಪಿಸಲು ಮತ್ತು ಶೋಷಣೆಯನ್ನು ತಡೆಗಟ್ಟಲು ಹಾಗೂ ಅವರ ಒಟ್ಟಾರೆ ಅಭಿವೃದ್ಧಿಯನ್ನು ಪೋಷಿಸಲು ಬದ್ಧವಾಗಿದೆ. ಹೆಚ್ಚುವರಿಯಾಗಿ, ನಿರ್ದೇಶನಾತ್ಮಕ ತತ್ವಗಳ ಅನುಚ್ಛೇದ 38 (2) ರಲ್ಲಿ ಪ್ರತಿಪಾದಿಸಿದಂತೆ, ರಾಜ್ಯವು ವ್ಯಕ್ತಿಗಳಲ್ಲಿ ಮಾತ್ರವಲ್ಲದೆ ವಿವಿಧ ಪ್ರದೇಶಗಳಲ್ಲಿ ವಾಸಿಸುವ ಮತ್ತು ವೈವಿಧ್ಯಮಯ ವೃತ್ತಿಗಳಲ್ಲಿ ತೊಡಗಿರುವ ಗುಂಪುಗಳ ನಡುವೆಯೂ ಸಹ ಸ್ಥಾನಮಾನ, ಸೌಲಭ್ಯಗಳು ಮತ್ತು ಅವಕಾಶಗಳಲ್ಲಿನ ಅಸಮಾನತೆಗಳನ್ನು ತೊಡೆದುಹಾಕಲು ಪ್ರಯತ್ನಿಸುತ್ತಿರುವುದರಿಂದ.

ಮತ್ತು ಸಂವಿಧಾನದ ಪೀಠಿಕೆ ಮತ್ತು ಮೂಲಭೂತ ಹಕ್ಕುಗಳಲ್ಲಿ, ವಿಶೇಷವಾಗಿ ಸಮಾನತೆಯ ಹಕ್ಕು (ಅನುಚ್ಛೇದಗಳು 14 ರಿಂದ 16) ಅದರೊಂದಿಗೆ ಸಂಯೋಜಿಸಲಾದ ಅನುಚ್ಛೇದ 38, 39, 41 ಮತ್ತು 46ರಲ್ಲಿ ಪ್ರತಿಬಿಂಬಿಸಿರುವಂತೆ, ಸಾಂವಿಧಾನಿಕ ಆದೇಶವು ಸಾಮಾಜಿಕ ನ್ಯಾಯ ಮತ್ತು ಅವಕಾಶದ ಸಮಾನತೆಯನ್ನು ಎತ್ತಿಹಿಡಿದಿರುವುದರಿಂದ. ಈ ಉಪಬಂಧಗಳು ಅಸಮಾನತೆಯನ್ನು ಕಡಿಮೆಯಾಗಿಸಲು ಮತ್ತು ಅನುಸೂಚಿತ ಜಾತಿಗಳನ್ನು ಒಳಗೊಂಡಂತೆ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಸಮುದಾಯಗಳನ್ನು ಉನ್ನತೀಕರಿಸಲು ರಕ್ಷಣಾತ್ಮಕ ವಿವೇಚನೆಯನ್ನು (protective discrimination) ಒತ್ತಿಹೇಳುತ್ತವೆ. ಈ ಸಾಂವಿಧಾನಿಕ ಗುರಿಗಳನ್ನು ಸಾಧಿಸಲು ಮತ್ತು ಸಾಮೂಹಿಕ ಪ್ರಗತಿಯನ್ನು ಖಚಿತಪಡಿಸಿಕೊಳ್ಳಲು, ಕರ್ನಾಟಕ ಸರ್ಕಾರವು ಎಲ್ಲಾ ಅನುಸೂಚಿತ ಜಾತಿಗಳ ನಡುವೆ ಮೀಸಲಾತಿ

ಪ್ರಯೋಜನಗಳ ನ್ಯಾಯಯುತ ಮತ್ತು ಸಮಾನವಾದ ಹಂಚಿಕೆ ಬದ್ಧವಾಗಿದ್ದು, ಆ ಮೂಲಕ ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗ ಎರಡರಲ್ಲೂ ಅವರಿಗೆ ಸಮಾನ ಮತ್ತು ನ್ಯಾಯಯುತ ಅವಕಾಶಗಳ ಪ್ರವೇಶವನ್ನು ಖಚಿತಪಡಿಸುತ್ತದೆ;

ಮತ್ತು ಈ ಸಂದರ್ಭದಲ್ಲಿ, ಏಳು ನ್ಯಾಯಾಧೀಶರನ್ನು ಒಳಗೊಂಡ ಮಾನ್ಯ ಸರ್ವೋಚ್ಚ ನ್ಯಾಯಾಲಯವು, 2011ರ ರಿಟ್ ಅರ್ಜಿ. ಸಿವಿಲ್ ಮೇಲ್ಮನವಿ ಸಂಖ್ಯೆ 2317ರಲ್ಲಿ 2022ರ ರಿಟ್ ಅರ್ಜಿ (ಸಿ) ಸಂಖ್ಯೆ 562, ದಿನಾಂಕ: 01.08.2024ರಂದು ಅನುಸೂಚಿತ ಜಾತಿಗಳೊಳಗಿನ ಉಪ ವರ್ಗೀಕರಣಕ್ಕೆ ಸಂಬಂಧಿಸಿದಂತೆ ಇತರ ಅರ್ಜಿಗಳೊಂದಿಗೆ ಸೇರಿ ತನ್ನ ತೀರ್ಪನ್ನು ಪ್ರಕಟಿಸಿದೆ. ಏಳು ನ್ಯಾಯಾಧೀಶರ ಪೀಠಗಳ ಪೈಕಿ ಆರು ನ್ಯಾಯಾಧೀಶರು ಅನುಸೂಚಿತ ಜಾತಿಗಳೊಳಗಿನ ಉಪ-ವರ್ಗೀಕರಣದ ಸಿಂಧುತ್ವವನ್ನು ಸಾಂವಿಧಾನಿಕವಾಗಿ ಅಂಗೀಕಾರಾರ್ಹವೆಂದು ಅಭಿಪ್ರಾಯಪಟ್ಟಿದ್ದಾರೆ. ಮೇಲಿನ ತೀರ್ಪಿನನುಸಾರ, ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯದ ಅನುಸೂಚಿತ ಜಾತಿಗಳ ವಿವಿಧ ಉಪ-ಗುಂಪುಗಳಲ್ಲಿ ಅನುಸೂಚಿತ ಜಾತಿಗಳ ಉಪ-ವರ್ಗೀಕರಣದ ಕುರಿತು ನಿರ್ದಿಷ್ಟ ಶಿಫಾರಸ್ಸುಗಳನ್ನು ಸೂಚಿಸಲು ನಿವೃತ್ತ ನ್ಯಾಯಮೂರ್ತಿ ಶ್ರೀ ಎಚ್.ಎನ್. ನಾಗಮೋಹನ್ ದಾಸ್ ಅವರನ್ನೊಳಗೊಂಡ ಏಕವ್ಯಕ್ತಿ ಆಯೋಗವನ್ನು ಸರ್ಕಾರದ ಆದೇಶ ಸಂ: SWD/SLP/8-2024 (P-1), ದಿನಾಂಕ:12.11.2024 ಮತ್ತು 03.12.2024ರ ಮೂಲಕ ರಚಿಸಿದೆ ಹಾಗೂ ಸದರಿ ಆಯೋಗವು 04.08.2025 ರಂದು ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿದೆ. ಮೀಸಲಾತಿ ಪ್ರಯೋಜನಗಳ ನ್ಯಾಯಯುತ ಮತ್ತು ಸಮಾನ ಹಂಚಿಕೆಯನ್ನು ಖಚಿತಪಡಿಸಿಕೊಳ್ಳಲು, ಅನುಸೂಚಿತ ಜಾತಿಗಳ ನಡುವಣ ಉಪ-ವರ್ಗೀಕರಣವನ್ನು ಅನುಷ್ಠಾನಗೊಳಿಸುವುದಕ್ಕಾಗಿ ಸದರಿ ಆಯೋಗವು ಮಾಡಿರುವ ಶಿಫಾರಸ್ಸುಗಳನ್ನು ಮಾರ್ಪಾಡಿನೊಂದಿಗೆ ಸರ್ಕಾರವು ಅನುಮೋದಿಸಿರುವುದರಿಂದ;

ಹಾಗೂ ನೂರಾ ಒಂದು (101) ಅನುಸೂಚಿತ ಜಾತಿಗಳ ಪ್ರವರ್ಗೀಕರಣ ಮತ್ತು ಅವುಗಳ ಉದ್ದೇಶಿತ ಶೇಕಡವಾರು ಮೀಸಲಾತಿಯು ಈ ಮುಂದಿನಂತಿದೆ:

| ಪ್ರವರ್ಗದ ಹೆಸರು | ಉದ್ದೇಶಿತ ಶೇಕಡವಾರು ಮೀಸಲಾತಿ |
|---|---|
| ಪ್ರವರ್ಗ – ಎ (16 ಜಾತಿಗಳು) | 6% |
| ಪ್ರವರ್ಗ – ಬಿ (19 ಜಾತಿಗಳು) | 6% |
| ಪ್ರವರ್ಗ – ಸಿ (63 ಜಾತಿಗಳು) | 5% |
| **ಒಟ್ಟು (98 ಜಾತಿಗಳು)** | **17%** |

ಮತ್ತು ಪ್ರವರ್ಗೀಕರಣದಿಂದ ಹೊರತಾಗಿರುವ ಮೂರು ಅನುಸೂಚಿತ ಜಾತಿಗಳಿದ್ದು, ಅವುಗಳೆಂದರೆ,:-

| ಕ್ರ. ಸಂ | ಜಾತಿಯ ಸಂಕೇತ | ಜಾತಿಯ ಹೆಸರು |
|---|---|---|
| 1 | 01 | ಆದಿ ಆಂಧ್ರ |
| 2 | 02 | ಆದಿ ದ್ರಾವಿಡ |
| 3 | 03 | ಆದಿ ಕರ್ನಾಟಕ |

ಹಾಗೂ, ಎ ಮತ್ತು ಬಿ ಪ್ರವರ್ಗಗಳಲ್ಲಿ ಉಲ್ಲೇಖಿಸದಿರುವ ಆದರೆ ಸಂವಿಧಾನ (ಅನುಸೂಚಿತ ಜಾತಿಗಳ) ಆದೇಶ, 1950ರಡಿ ಪಟ್ಟಿ ಮಾಡಲಾದ ಮತ್ತು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದವುಗಳೂ ಸಹ, ಸರ್ಕಾರದ ಸುತ್ತೋಲೆ ಸಂಖ್ಯೆ. ಎಸ್‌ಡಬ್ಲ್ಯೂಡಿ 8 ಎಸ್‌ಎಲ್‌ಪಿ 2024 (ಪಿ-5) ದಿನಾಂಕ: 08.10.2025 ಮತ್ತು 09.10.2025ರಲ್ಲಿ ನಿರ್ದಿಷ್ಟಪಡಿಸಲಾದ ಜಾತಿ ಪ್ರಮಾಣಪತ್ರದ ಆಧಾರದ ಮೇಲೆ ಪ್ರವರ್ಗ–ಎ ಅಥವಾ ಪ್ರವರ್ಗ–ಬಿ ಇವುಗಳಡಿ ಮೀಸಲಾತಿಗಾಗಿ ಆಯ್ಕೆ (opt) ಮಾಡಿಕೊಳ್ಳಲು ಅರ್ಹರಾಗಿರತಕ್ಕದ್ದು.

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದ ಮೂಲಕ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ. -** (1) ಈ ಅಧಿನಿಯಮವನ್ನು ಕರ್ನಾಟಕ ಅನುಸೂಚಿತ ಜಾತಿಗಳ (ಉಪ-ವರ್ಗೀಕರಣ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಪ್ರವರ್ಗ-ಸಿ ಶಿರೋನಾಮೆಯಡಿ 3ನೇ ಪ್ರಕರಣದಲ್ಲಿನ ಪರಂತುಕಗಳು ಈ ಕೂಡಲೇ ಜಾರಿಗೆ ಬರತಕ್ಕದ್ದು, ಎಂಬುದನ್ನು ಹೊರತುಪಡಿಸಿದಂತೆ ಈ ಅಧಿನಿಯಮದ ಎಲ್ಲಾ ಉಪಬಂಧಗಳು 25ನೇ ಆಗಸ್ಟ್ 2025 ರಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ನೇಮಕಾತಿ" ಎಂದರೆ ನೇರ ನೇಮಕಾತಿಯ ಮೂಲಕ ನೇಮಕಾತಿ;

(ಬಿ) "ಬ್ಯಾಕ್‌ಲಾಗ್ ಖಾಲಿ ಹುದ್ದೆಗಳು" ಎಂದರೆ ಹಿಂದಿನ ನೇಮಕಾತಿಯಿಂದ ಭರ್ತಿಯಾಗದೆ ಮತ್ತು ಮುಂದೂಡಿ ತರಲಾದ ಉಳಿದ ಖಾಲಿ ಹುದ್ದೆಗಳನ್ನು ಒಳಗೊಳ್ಳುವುದು;

(ಸಿ) "ಶೈಕ್ಷಣಿಕ ಸಂಸ್ಥೆಗಳು" ಎಂದರೆ, ಸರ್ಕಾರದಿಂದ ಈ ಸಂಬಂಧವಾಗಿ ಸ್ಥಾಪಿಸಿದ ಅಥವಾ ಅಂಗೀಕೃತಗೊಳಿಸಿದ ಯಾವುದೇ ವಿಶ್ವವಿದ್ಯಾಲಯ ಅಥವಾ ಪ್ರಾಧಿಕಾರವು ನೀಡುವ ಅಥವಾ ಪ್ರದಾನ ಮಾಡುವ ಯಾವುದೇ ಪ್ರಮಾಣಪತ್ರ, ಪದವಿ ಅಥವಾ ಡಿಪ್ಲೊಮಾ ಅಥವಾ ಇತರ ಶೈಕ್ಷಣಿಕ ಗೌರವಗಳಿಗಾಗಿ ತನ್ನ ವಿದ್ಯಾರ್ಥಿಗಳನ್ನು ಸಿದ್ಧಪಡಿಸುವ, ತರಬೇತಿ ನೀಡುವ ಅಥವಾ ಮಾರ್ಗದರ್ಶನ ನೀಡುವ ಉದ್ದೇಶದೊಂದಿಗೆ ,-

(i) ರಾಜ್ಯ ಸರ್ಕಾರದಿಂದ ನಿರ್ವಹಿಸಲಾಗುತ್ತಿರುವ ಅಥವಾ ರಾಜ್ಯನಿಧಿಗಳಿಂದ ಸಹಾಯಧನ ಪಡೆಯುತ್ತಿರುವ ಯಾವುದೇ ಶಾಲೆ, ಕಾಲೇಜು ಅಥವಾ ಇತರ ಶೈಕ್ಷಣಿಕ ಸಂಸ್ಥೆ ಅಥವಾ ಕಾನೂನಿನ ಮೂಲಕ ಸ್ಥಾಪಿಸಲಾಗಿರುವ ಯಾವುದೇ ವಿಶ್ವವಿದ್ಯಾಲಯ; ಅಥವಾ

(ii) ಸರ್ಕಾರದಿಂದ ಮಾನ್ಯತೆ ಪಡೆದ ಅಥವಾ ಅಂಗೀಕೃತವಾದ ಯಾವುದೇ ಸಂಸ್ಥೆ ಅಥವಾ ತರಬೇತಿ ಕೇಂದ್ರ;

(ಡಿ) "ಸರ್ಕಾರ" ಎಂದರೆ ಕರ್ನಾಟಕ ರಾಜ್ಯ ಸರ್ಕಾರ;

(ಇ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದಡಿ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಫ್) "ಸಾರ್ವಜನಿಕ ಸೇವೆ" ಎಂದರೆ ಈ ಮುಂದಿನ ಯಾವುದೇ ಕಚೇರಿ ಅಥವಾ ಸ್ಥಾಪನೆಯಲ್ಲಿನ ನಾಗರಿಕ ಸೇವೆ,-

(i) ಸರ್ಕಾರ;

(ii) ಸ್ಥಳೀಯ ಪ್ರಾಧಿಕಾರ,-

(ಎ) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರಡಿಯಲ್ಲಿ ಸ್ಥಾಪಿಸಲಾದ ಗ್ರಾಮೀಣ ಸ್ಥಳೀಯ ಪ್ರಾಧಿಕಾರಗಳು;

(ಬಿ) ಕರ್ನಾಟಕ ಪುರಸಭೆಗಳ ಅಧಿನಿಯಮ, 1964, ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 ಮತ್ತು ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024ರಡಿಯಲ್ಲಿ ಸ್ಥಾಪಿಸಲಾದ ನಗರ ಸ್ಥಳೀಯ ಪ್ರಾಧಿಕಾರಗಳು;

(iii) ಸರ್ಕಾರದ ಸಂಪೂರ್ಣ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ನಿಗಮ ಅಥವಾ;

(iv) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಡಿ ರಾಜ್ಯ ಸರ್ಕಾರದ ಮೂಲಕ ಸ್ಥಾಪಿಸಲಾದ ನಿಗಮಿತ ಶಾಸನಬದ್ಧ ನಿಕಾಯ;

(v) ಶೈಕ್ಷಣಿಕ ಸಂಸ್ಥೆಗಳು;

(vi) ಕಂಪನಿಗಳ ಅಧಿನಿಯಮ, 2013 (2013ರ ಕೇಂದ್ರ ಅಧಿನಿಯಮ 18)ರ ಉಪಬಂಧಗಳಡಿಯಲ್ಲಿ ರಾಜ್ಯ ಸರ್ಕಾರದ ಮೂಲಕ ಸ್ಥಾಪಿಸಲಾದ ಸರ್ಕಾರಿ ಕಂಪನಿ;

(vii) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಡಿ ರಾಜ್ಯ ಸರ್ಕಾರದ ಮೂಲಕ ಸ್ಥಾಪಿಸಲಾದ ಯಾವುದೇ ಇತರ ನಿಕಾಯ ಅಥವಾ ಪ್ರಾಧಿಕಾರ;

(viii) ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 (1959ರ ಕರ್ನಾಟಕ ಅಧಿನಿಯಮ 11)ರಡಿ ನೋಂದಾಯಿಸಲಾದ ಅಥವಾ ನೋಂದಾಯಿಸಲಾಗಿದೆ ಎಂದು ಭಾವಿಸಲಾದ ಸಹಕಾರ ಸಂಘ; ಮತ್ತು

(ಜಿ) "ಅನುಸೂಚಿತ ಜಾತಿಗಳು" ಎಂಬುದು ಭಾರತ ಸಂವಿಧಾನದ 366ನೇ ಅನುಚ್ಛೇದದ ಖಂಡ (24)ರೊಂದಿಗೆ ಓದಲಾದ ಭಾರತ ಸಂವಿಧಾನದ 341ನೇ ಅನುಚ್ಛೇದದಡಿ ಮಾಡಲಾದ ಸಂವಿಧಾನ (ಅನುಸೂಚಿತ ಜಾತಿಗಳ) ಆದೇಶ, 1950ರಲ್ಲಿ ಅದಕ್ಕೆ ನೀಡಲಾದ ಅದೇ ಅರ್ಥವನ್ನು ಹೊಂದಿರತಕ್ಕದ್ದು;

(2) ಈ ಅಧಿನಿಯಮದಲ್ಲಿ ಬಳಸಲಾದ ಆದರೆ ಪರಿಭಾಷಿಸದಿರುವ ಎಲ್ಲಾ ಇತರ ಪದಗಳು ಮತ್ತು ಪದಾವಳಿಗಳು ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899 (1899ರ ಕರ್ನಾಟಕ ಅಧಿನಿಯಮ 03) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಸಂಬಂಧಿತ ಅಧಿನಿಯಮಗಳಲ್ಲಿ ಅವುಗಳಿಗೆ ನೀಡಲಾದ ಅದೇ ಅರ್ಥವನ್ನು ಹೊಂದಿರತಕ್ಕದ್ದು.

**3. ಉಪ-ವರ್ಗೀಕರಣ.-** ಸಾಮಾಜಿಕ ನ್ಯಾಯ ಮತ್ತು ಅವಕಾಶದ ಸಮಾನತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಎಲ್ಲಾ ಅನುಸೂಚಿತ ಜಾತಿಗಳು ಮೀಸಲಾತಿಯ ಪ್ರಯೋಜನಗಳನ್ನು ನ್ಯಾಯಯುತ, ನ್ಯಾಯಸಮ್ಮತ, ಸಮರ್ಪಕ ಮತ್ತು ಸಮಾನವಾಗಿ ಅನುಭವಿಸುವುದನ್ನು ಖಚಿತಪಡಿಸಿಕೊಳ್ಳಲು, ರಾಜ್ಯ ಸರ್ಕಾರವು ನೂರಾ ಒಂದು (101) ಅನುಸೂಚಿತ ಜಾತಿಗಳನ್ನು ಮೂರು ಪ್ರವರ್ಗಗಳಾಗಿ ಉಪ-ವರ್ಗೀಕರಿಸಿದೆ, ಇವುಗಳನ್ನು ಪರಸ್ಪರ, ಹಿಂದುಳಿದಿರುವಿಕೆ, ಸಾಮಾಜಿಕ ಒಗ್ಗಟ್ಟು ಮತ್ತು ಜನಸಂಖ್ಯೆಯ ಆಧಾರದ ಮೇಲೆ ಗುರುತಿಸಲಾಗಿದೆ. ಮೂರು ಪ್ರವರ್ಗಗಳ ಮೀಸಲಾತಿಯ ಶೇಕಡಾವಾರು ಪ್ರಮಾಣವು ಈ ಪ್ರಕರಣದ ಕೆಳಗೆ ನಮೂದಿಸಲಾದ (i), (ii) ಮತ್ತು (iii) ಖಂಡಗಳಲ್ಲಿ ನಿಯಮಿಸಲಾದ ಪ್ರಮಾಣದಲ್ಲಿರತಕ್ಕದ್ದು:

ಪರಂತು, ಪ್ರವರ್ಗೀಕರಣದಿಂದ ಹೊರತಾಗಿರುವ ಮೂರು ಅನುಸೂಚಿತ ಜಾತಿಗಳಿದ್ದು, ಅವುಗಳೆಂದರೆ,:-

| ಕ್ರ. ಸಂ | ಜಾತಿಯ ಸಂಕೇತ | ಜಾತಿಯ ಹೆಸರು |
|---|---|---|
| 1 | 01 | ಆದಿ ಆಂಧ್ರ |
| 2 | 02 | ಆದಿ ದ್ರಾವಿಡ |
| 3 | 03 | ಆದಿ ಕರ್ನಾಟಕ |

ಹಾಗೂ, ಎ ಮತ್ತು ಬಿ ಪ್ರವರ್ಗಗಳಲ್ಲಿ ಉಲ್ಲೇಖಿಸದಿರುವ ಆದರೆ ಸಂವಿಧಾನ (ಅನುಸೂಚಿತ ಜಾತಿಗಳ) ಆದೇಶ, 1950ರಡಿ ಪಟ್ಟಿ ಮಾಡಲಾದ ಮತ್ತು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದವುಗಳೂ ಸಹ, ಸರ್ಕಾರದ ಸುತ್ತೋಲೆ ಸಂಖ್ಯೆ. ಎಸ್‌ಡಬ್ಲೂಡಿ 8 ಎಸ್‌ಎಲ್‌ಪಿ 2024 (ಪಿ-5) ದಿನಾಂಕ: 08.10.2025 ಮತ್ತು 09.10.2025ರಲ್ಲಿ ನಿರ್ದಿಷ್ಟಪಡಿಸಲಾದ ಜಾತಿ ಪ್ರಮಾಣಪತ್ರದ ಆಧಾರದ ಮೇಲೆ ಪ್ರವರ್ಗ–ಎ ಅಥವಾ ಪ್ರವರ್ಗ–ಬಿ ಇವುಗಳಡಿ ಮೀಸಲಾತಿಗಾಗಿ ಆಯ್ಕೆ (opt) ಮಾಡಿಕೊಳ್ಳಲು ಅರ್ಹರಾಗಿರತಕ್ಕದ್ದು.

ಪರಂತು ಈ ಪ್ರಕರಣದಡಿ ಮೂರು ಪ್ರವರ್ಗಗಳಿಗೆ ನಿರ್ದಿಷ್ಟಪಡಿಸಲಾದ ಮೀಸಲಾತಿಯು ಅರ್ಹ ಅಭ್ಯರ್ಥಿಗಳ ಲಭ್ಯತೆಗೆ ಒಳಪಟ್ಟಿರತಕ್ಕದ್ದು.

(i) ಅನುಸೂಚಿತ ಜಾತಿಗಳಿಗೆ ಉಪ-ವರ್ಗೀಕರಣದಡಿ ಹಾಗೆ ಮೀಸಲಿರಿಸಲಾದ ಹುದ್ದೆಗಳು ಅಥವಾ ಸ್ಥಾನಗಳ ಶೇಕಡ ಆರರಷ್ಟನ್ನು ಈ ಕೆಳಗಿನ ಅನುಸೂಚಿತ ಜಾತಿಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಮೀಸಲಿಡತಕ್ಕದ್ದು, ಅದನ್ನು ಅನುಸೂಚಿತ ಜಾತಿಗಳು (ಪ್ರವರ್ಗ-ಎ) ಎಂಬುದಾಗಿ ಉಲ್ಲೇಖಿಸತಕ್ಕದ್ದು, ಅವುಗಳೆಂದರೆ: -

**ಪ್ರವರ್ಗ-ಎ**

| ಕ್ರಮ ಸಂಖ್ಯೆ | ಜಾತಿ ಸಂಕೇತ | ಜಾತಿಯ ಹೆಸರು | ಪ್ರವರ್ಗ-ಎ-ಗೆ ಮೀಸಲಿರಿಸಲಾದ ಶೇಕಡವಾರು ಪ್ರಮಾಣ |
|---|---|---|---|
| 1 | 22 | ಭಂಬಿ, ಭಾಂಭಿ, ಅಸಾದರು, ಅಸೋಡಿ, ಚಮಡಿಯಾ, ಚಮ್ಮಾರ, ಚಂಬಾರ, ಚಮಗಾರ, ಹರಳಯ್ಯ, ಹರಳಿ, ಖಾಲ್ಪ, ಮಚಿಗೋರ, ಮೋಚಿಗಾರ, ಮಾದರ, ಮಾದಿಗ, ಮೋಚಿ, ಮುಚ್ಚಿ, ತೆಲುಗು ಮೋಚಿ, ಕಾಮತಿ ಮೋಚಿ, ರಾಣಿಗರ, ರೋಹಿದಾಸ, ರೋಹಿತ, ಸಮಗಾರ | |

| | | | |
|---|---|---|---|
| 2 | 28 | ಚಂಡಾಲ | 6% |
| 3 | 32 | ಧೋರ, ಕಕ್ಕಯ್ಯ, ಕಂಕಯ್ಯ | |
| 4 | 40 | ಹಲ್ಸಾರ, ಹಸ್ಲಾರ, ಹುಲಸ್ವಾರ, ಹಲಸ್ವಾರ | |
| 5 | 42 | ಹಸ್ಲಾ | |
| 6 | 48 | ಕಡಯ್ಯನ್ | |
| 7 | 50 | ಕೆಪ್ಮರಿಸ್ | |
| 8 | 51 | ಕೊಲುಪುಲ್ವಂಡ್ಲು | |
| 9 | 56 | ಕುಡುಂಬನ್ | |
| 10 | 61 | ಮಾದಿಗ | |
| 11 | 72 | ಮಾಂಗ್, ಮಾತಂಗ, ಮಿನಿಮಾದಿಗ | |
| 12 | 76 | ಮಾವಿಲನ್ | |
| 13 | 88 | ಪಂಚಮ | |
| 14 | 89 | ಪನ್ನಿಯಾಂಡಿ | |
| 15 | 93 | ಸಮಗಾರ | |
| 16 | 94 | ಸಂಬನ್ | |

(ii) ಅನುಸೂಚಿತ ಜಾತಿಗಳಿಗೆ ಉಪ-ವರ್ಗೀಕರಣದಡಿ ಹಾಗೆ ಮೀಸಲಿರಿಸಲಾದ ಹುದ್ದೆಗಳು ಅಥವಾ ಸ್ಥಾನಗಳ ಶೇಕಡ ಆರರಷ್ಟನ್ನು ಈ ಕೆಳಗಿನ ಅನುಸೂಚಿತ ಜಾತಿಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಮೀಸಲಿಡತಕ್ಕದ್ದು, ಅದನ್ನು ಅನುಸೂಚಿತ ಜಾತಿಗಳು (ಪ್ರವರ್ಗ-ಬಿ) ಎಂಬುದಾಗಿ ಉಲ್ಲೇಖಿಸತಕ್ಕದ್ದು, ಅವುಗಳೆಂದರೆ:-

**ಪ್ರವರ್ಗ-ಬಿ**

| **ಕ್ರಮ ಸಂಖ್ಯೆ** | **ಜಾತಿ ಸಂಕೇತ** | **ಜಾತಿಯ ಹೆಸರು** | **ಪ್ರವರ್ಗ-ಸಿ-ಗೆ ಮೀಸಲಿರಿಸಲಾದ ಶೇಕಡವಾರು ಪ್ರಮಾಣ** |
|---|---|---|---|
| 1 | 7 | ಅನಾಮುಕ್ | 6% |
| 2 | 8 | ಅರೈ ಮಾಲಾ | |
| 3 | 10 | ಅರ್ವಾ ಮಾಲಾ | |
| 4 | 15 | ಬಲಗೈ | |
| 5 | 27 | ಛಲವಾದಿ, ಚಲ್ವಾದಿ, ಚನ್ನಯ್ಯ | |
| 6 | 86 | ಪಲ್ಲನ್ | |
| 7 | 44 | ಹೊಲಯ, ಹೊಲೇರ, ಹೊಲೆಯ | |
| 8 | 63 | ಮಾಹ್ಯವಂಶಿ, ಧೇಡ್, ವಂಕಾರ, ಮಾರು ವಂಕಾರ | |
| 9 | 65 | ಮಾಲ | |
| 10 | 67 | ಮಾಲಾ ಹಣ್ಣಾಯಿ | |
| 11 | 68 | ಮಾಲ ಜಂಗಮ | |
| 12 | 69 | ಮಾಲ ಮಾಸ್ತಿ | |
| 13 | 70 | ಮಾಲ ಸಲೆ, ನೆಟ್ಕಾಣಿ | |
| 14 | 62 | ಮಹಾರ್, ತರಲ್, ದೇಗುಮೇಗು | |
| 15 | 78 | ಮೊಗೇರ | |
| 16 | 80 | ಮುಂಡಾಲ | |
| 17 | 90 | ಪರೈಯಾನ್, ಪರಾಯ | |
| 18 | 92 | ರಾಣೆಯಾರ್ | |
| 19 | 101 | ವಳ್ಳುವನ್ | |

(iii) ಅನುಸೂಚಿತ ಜಾತಿಗಳಿಗೆ ಉಪ-ವರ್ಗೀಕರಣದಡಿ ಹಾಗೆ ಮೀಸಲಿರಿಸಲಾದ ಹುದ್ದೆಗಳು ಅಥವಾ ಸ್ಥಾನಗಳ ಶೇಕಡ ಐದರಷ್ಟನ್ನು ಈ ಕೆಳಗಿನ ಅನುಸೂಚಿತ ಜಾತಿಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಮೀಸಲಿಡತಕ್ಕದ್ದು, ಅದನ್ನು ಅನುಸೂಚಿತ ಜಾತಿಗಳು (ಪ್ರವರ್ಗ-ಸಿ) ಎಂಬುದಾಗಿ ಉಲ್ಲೇಖಿಸತಕ್ಕದ್ದು, ಅವುಗಳೆಂದರೆ:-

**ಪ್ರವರ್ಗ-ಸಿ**

| ಕ್ರಮ ಸಂಖ್ಯೆ | ಜಾತಿ ಸಂಕೇತ | ಜಾತಿಯ ಹೆಸರು | ಪ್ರವರ್ಗ-ಎ-ಗೆ ಮೀಸಲಿರಿಸಲಾದ ಶೇಕಡವಾರು ಪ್ರಮಾಣ |
|---|---|---|---|
| 1 | 4 | ಆದಿಯಾ (ಕೊಡಗು ಜಿಲ್ಲೆಯಲ್ಲಿ) | |
| 2 | 5 | ಅಗೇರ | |
| 3 | 6 | ಅಜಿಲ | |
| 4 | 9 | ಅರುಂತತಿಯಾರ್ | |
| 5 | 11 | ಬೈರಾ | |
| 6 | 12 | ಬಕದ್ | |
| 7 | 14 | ಬಕುಡ | |
| 8 | 16 | ಬಂಡಿ | |
| 9 | 13 | ಬಂತ್ (ಬೆಳಗಾವಿ, ಬಿಜಾಪುರ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ) | |
| 10 | 17 | ಬಂಜಾರ, ಲಂಬಾಣಿ, ಲಂಬಾಡ, ಲಂಬಾಡಿ, ಲಮಾಣಿ, ಸುಗಾಲಿ, ಸುಕಾಲಿ | |
| 11 | 18 | ಬತಡಾ | |
| 12 | 19 | ಬುಡ್ಗಜಂಗಮ, ಬೇಡಜಂಗಮ, | |
| 13 | 20 | ಬೆಳ್ಳಾರ | |
| 14 | 21 | ಭಂಗಿ, ,ಮೆಹ್ತರ್, ಒಲ್ಗಾಣ, ರೂಖಿ , ಮಲ್ಕಾಣ ಹಲಾಲ್ಖೋರ , ಲಾಲ್ಬೇಗಿ ,ಬಾಲ್ಮಿಕಿ ,ಕೋರಾರ, ಜಾಡಮಾಲಿ | |
| 15 | 23 | ಭೋವಿ, ಒಡ, ಒಡ್ಡೆ, ವಡ್ಡರ, ವಡ್ಡರ್, ವೊಡ್ಡರ, ವೊಡ್ಡರ್, ಬೋವಿ (ಬೆಸ್ತೇತರ), ಕಲ್ಲುವಡ್ಡರ, ಮಣ್ಣುವಡ್ಡರ | |
| 16 | 24 | ಬಿಂಡ್ಲಾ | |
| 17 | 25 | ಬ್ಯಾಗಾರ | |
| 18 | 26 | ಚಕ್ಕಿಲಿಯನ್ | |
| 19 | 29 | ಚೆನ್ನದಾಸರ, ಹೊಲಯದಾಸರ | |
| 20 | 30 | ದಕ್ಕಲ, ಡೊಕ್ಕಲ್ವಾರ | |
| 21 | 31 | ದಕ್ಕಲಿಗ | |
| 22 | 33 | ಡೋಮ, ಡೊಂಬರ, ಪೈಡಿ, ಪಾನೊ | |
| 23 | 34 | ಎಲ್ಲಮಾಳ್ವಾರ, ಯೆಲ್ಲಮ್ಮಲವಾಂಡ್ಲು | |
| 24 | 35 | ಗಂಟಿ ಚೋರಸ | |
| 25 | 36 | ಗರೋಡಾ, ಗಾರೋ | |
| 26 | 37 | ಗೊಡ್ಡ | |
| 27 | 38 | ಗೋಸಂಗಿ | |
| 28 | 39 | ಹಲ್ಲೀರ | |
| 29 | 41 | ಹಂದಿಜೋಗಿಗಳು | |
| 30 | 43 | ಹೊಲಾರ, ವಲ್ಹಾರ | 5% |

| | | | |
|---|---|---|---|
| 31 | 45 | ಹೊಲೆಯ ದಾಸರಿ | |
| 32 | 46 | ಜಗ್ಗಲಿ | |
| 33 | 47 | ಜಂಬೂವುಲು | |
| 34 | 49 | ಕಲ್ಲಾಡಿ | |
| 35 | 52 | ಕೂಸ | |
| 36 | 53 | ಕೊರಚ ,ಕೊರಚರ | |
| 37 | 54 | ಕೊರಮ, ಕೊರವ , ಕೊರವರ | |
| 38 | 55 | ಕೋಟೆಗಾರ, ಮೇತ್ರಿ | |
| 39 | 57 | ಕುರವನ್ | |
| 40 | 58 | ಲಿಂಗದೇರ | |
| 41 | 59 | ಮಚಲಾ | |
| 42 | 60 | ಮದರಿ | |
| 43 | 64 | ಮೈಲಾ | |
| 44 | 66 | ಮಾಲ ದಾಸರಿ | |
| 45 | 71 | ಮಾಲ ಸನ್ಯಾಸಿ | |
| 46 | 73 | ಮಾಂಗ್ ಗಾರುಡಿ, ಮಾಂಗ್ ಗಾರೋಡಿ | |
| 47 | 74 | ಮಣ್ಣೆ | |
| 48 | 75 | ಮಾಸ್ತಿ | |
| 49 | 77 | ಮೇಘವಾಲ, ಮೇಂಗ್ವಾರ | |
| 50 | 79 | ಮುಖ್ರಿ | |
| 51 | 81 | ನಾಡಿಯಾ, ಹಾಡಿ | |
| 52 | 82 | ನಲ್ಕಾದಾಯ | |
| 53 | 83 | ನಲಕೆಯವ | |
| 54 | 84 | ನಾಯಡಿ | |
| 55 | 85 | ಪಾಲೆ | |
| 56 | 87 | ಪಂಬಾಡ | |
| 57 | 91 | ಪರಾವನ್ | |
| 58 | 95 | ಸಪರಿ | |
| 59 | 96 | ಸಿಳ್ಳೆಕ್ಯಾತರು | |
| 60 | 97 | ಸಿಂಧೋಲು, ಚಿಂದೊಲು | |
| 61 | 98 | ಸುಡುಗಾಡು ಸಿದ್ಧ | |
| 62 | 99 | ತೋಟಿ | |
| 63 | 100 | ತಿರ್ಗಾರ, ತೀರ್ಬಂದ | |

ಪರಂತು, ಅನುಸೂಚಿತ ಜಾತಿಗಳ ಪ್ರವರ್ಗ-ಸಿ ಪಟ್ಟಿಯ ಸಂದರ್ಭದಲ್ಲಿ, ಮೇಲಿನ ಕೋಷ್ಟಕದ ಕ್ರಮ ಸಂಖ್ಯೆ 10, 15, 36 ಮತ್ತು 37ರಲ್ಲಿ ನಮೂದಿಸಲಾದ (ಅಂದರೆ ಜಾತಿ ಸಂಕೇತ 17, 23, 53 ಮತ್ತು 54) ಇವುಗಳನ್ನು ಹೊರತುಪಡಿಸಿ, 59 ಜಾತಿಗಳಿಗಾಗಿ ಪ್ರತಿ ಐದು ಹುದ್ದೆಗಳು ಅಥವಾ ಸ್ಥಾನಗಳ ಪೈಕಿ ಕನಿಷ್ಠ ಒಂದನ್ನು ಪ್ರವರ್ಗ-ಸಿ ಯೊಳಗೆ ಮೀಸಲಿರಿಸತಕ್ಕದ್ದು:

ಮತ್ತು ಪರಂತು, ಪ್ರವರ್ಗ-ಸಿ ಯಲ್ಲಿನ ಈ 59 ಜಾತಿಗಳಡಿ ಯಾವುದೇ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದರೆ, ಅಂಥ ಹುದ್ದೆಗಳು ಅಥವಾ ಸ್ಥಾನಗಳನ್ನು ಮೇಲೆ ಹೇಳಿದ ನಾಲ್ಕು (ಅಂದರೆ ಕ್ರಮ ಸಂಖ್ಯೆ 10, 15, 36 ಮತ್ತು 37) ಜಾತಿಗಳಿಂದ ಭರ್ತಿ ಮಾಡತಕ್ಕದ್ದು.

**4. ಬ್ಯಾಕ್‌ಲಾಗ್ ಖಾಲಿ ಹುದ್ದೆಗಳು.-** ಪ್ರಕರಣ 3ರಲ್ಲಿ ಉಪಬಂಧಿಸಲಾದ ಶೇಕಡಾವಾರು ಮೀಸಲಾತಿಯು, ಸರ್ಕಾರಿ ನೇಮಕಾತಿಗಳಿಗೆ ಸಂಬಂಧಿಸಿದ ಹಿಂಬಾಕಿ (ಬ್ಯಾಕ್‌ಲಾಗ್) ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಅನ್ವಯವಾಗತಕ್ಕದ್ದು.

**5. ಮೀಸಲಾತಿಗಳು ಬಾಧಿತವಾಗುವಂತಿಲ್ಲ.-** ಈ ಅಧಿನಿಯಮದಲ್ಲಿರುವದಾವುದೂ ಕೇಂದ್ರ ಸರ್ಕಾರದ ಯಾವುದೇ ಇಲಾಖೆ ಅಥವಾ ಅದರ ಒಡೆತನದ ಅಥವಾ ನಿಯಂತ್ರಣದಲ್ಲಿರುವ ಯಾವುದೇ ನಿಗಮ ಅಥವಾ ಉದ್ಯಮ ಅಥವಾ ಕೇಂದ್ರ ಸರ್ಕಾರಕ್ಕೆ ಸೇರಿದ ಅಥವಾ ಅದರ ನಿಯಂತ್ರಣದಲ್ಲಿರುವ ಯಾವುದೇ ಶಿಕ್ಷಣ ಸಂಸ್ಥೆಗಳು ಅಥವಾ ಅದರ ಸಂಸ್ಥೆಯ, ಯಾವುದೇ ಹುದ್ದೆ ಅಥವಾ ಸೇವೆಯ ಯಾವುದೇ ನೇಮಕಾತಿಗೆ ಅನ್ವಯಿಸತಕ್ಕದ್ದಲ್ಲ.

**6. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.-** ಈ ಅಧಿನಿಯಮದ ಉಪಬಂಧಗಳು ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ, ಪ್ರಾಧಿಕಾರ ಅಥವಾ ವ್ಯಕ್ತಿಗಳ ವಿರುದ್ಧ ಯಾವುದೇ ದಾವೆಯನ್ನು, ಅಭಿಯೋಜನೆಯನ್ನು ಅಥವಾ ಇತರ ಕಾನೂನು ಕ್ರಮವನ್ನು ಹೂಡತಕ್ಕದ್ದಲ್ಲ.

**7. ರೋಸ್ಟರ್ ಬಿಂದುಗಳು.-** (1) ರಾಜ್ಯ ನಾಗರಿಕ ಸೇವೆಗಳು ಮತ್ತು ಸ್ಥಳೀಯ ಪ್ರಾಧಿಕಾರ ಅಥವಾ ನಿಗಮ ಅಥವಾ ಇತರ ನಿಕಾಯದ ಇನ್ನಿತರ ಸಂಸ್ಥೆಗಳಲ್ಲಿ ನೇಮಕಾತಿಗಳ ಉದ್ದೇಶಕ್ಕಾಗಿ ಲಂಬ ಮತ್ತು ಸಮತಲ ಮೀಸಲಾತಿ ಎರಡರಲ್ಲೂ ಅನುಸೂಚಿತ ಜಾತಿಗಳಿಗೆ ಸಂಬಂಧಿಸಿದಂತೆ ರೋಸ್ಟರ್ ಬಿಂದುಗಳನ್ನು ನಿಗದಿಪಡಿಸುವುದು ಅಥವಾ ಹೊಂದಾಣಿಕೆ ಮಾಡಿಕೊಳ್ಳುವುದು.

(2) ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ಈ ಪ್ರಕರಣದಡಿ ಮಾಡಲಾದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ, ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

**8. ಉಳಿಸುವಿಕೆಗಳು.-** (1) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಉಪಬಂಧಿಸಿದುದನ್ನುಳಿದು, ಸರ್ಕಾರಿ ಸೇವೆ ಅಥವಾ ಶೈಕ್ಷಣಿಕ ಸಂಸ್ಥೆಗಳಲ್ಲಿ ಅನುಸೂಚಿತ ಜಾತಿಗಳ ಮೀಸಲಾತಿಗೆ ಸಂಬಂಧಪಟ್ಟ ಸರ್ಕಾರಿ ಆದೇಶಗಳು ಮುಂದುವರೆಯತಕ್ಕದ್ದು.

(2) ಈ ಅಧಿನಿಯಮದ ಪ್ರಾರಂಭದ ದಿನಾಂಕಕ್ಕೆ ಮೊದಲು ಹೊರಡಿಸಲಾದ ಮತ್ತು ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಜಾರಿಯಲ್ಲಿರುವ ಅನುಸೂಚಿತ ಜಾತಿಗಳ ಮೀಸಲಾತಿ ಮತ್ತು ಉಪ-ವರ್ಗೀಕರಣಕ್ಕೆ ಸಂಬಂಧಿಸಿದ ಸರ್ಕಾರದ ಆದೇಶ ಸಂ. ಎಸ್‌ಡಬ್ಲೂಡಿ 8 ಎಸ್‌ಎಲ್‌ಪಿ 2024 ದಿನಾಂಕ: 25.08.2025 ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ. ಎಸ್‌ಡಬ್ಲೂಡಿ 8 ಎಸ್‌ಎಲ್‌ಪಿ 2024 (ಪಿ-5) ದಿನಾಂಕ: 08.10.2025 ಮತ್ತು 09.10.2025, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಿರುವಷ್ಟರ ಮಟ್ಟಿಗೆ, ಈ ಅಧಿನಿಯಮದಡಿ ಕೈಗೊಂಡ ಯಾವುದೇ ಕ್ರಮ ಅಥವಾ ಮಾಡಿದ ಯಾವುದೇ ಆದೇಶ, ಸುತ್ತೋಲೆಯಿಂದ ರದ್ದುಪಡಿಸಿದ ಹೊರತು ಮತ್ತು ಅಲ್ಲಿಯವರೆಗೆ ಈ ಅಧಿನಿಯಮಕ್ಕೆ ಅನುಗುಣವಾದ ಉಪಬಂಧಗಳಡಿ ಅವುಗಳನ್ನು ಮಾಡಲಾಗಿರುವಂತೆ ಅಥವಾ ಹೊರಡಿಸಲಾಗಿರುವಂತೆ ಜಾರಿಯಲ್ಲಿರುವುದು, ಮುಂದುವರೆಯತಕ್ಕದ್ದು ಮತ್ತು ಪರಿಣಾಮಕಾರಿಯಾಗಿರತಕ್ಕದ್ದು.

**9. ಉಪ-ವರ್ಗೀಕರಣದ ಶೇಕಡಾವಾರು ಮೀಸಲಾತಿ ಪ್ರಮಾಣದಲ್ಲಿ ಮಾರ್ಪಾಡು.-** ಸರ್ಕಾರದಿಂದ ಹೊಸ ದತ್ತಾಂಶ ಅಥವಾ ಮಾಹಿತಿಯನ್ನು ಸ್ವೀಕರಿಸಿದ ತರುವಾಯ, ದತ್ತಾಂಶವನ್ನು ವಿಶ್ಲೇಷಿಸಲು ಮತ್ತು ಅಗತ್ಯವಿದ್ದಲ್ಲಿ ಅನುಸೂಚಿತ ಜಾತಿಗಳ ಸದಸ್ಯರಿಗೆ ಅವಶ್ಯಕ ಮಾರ್ಪಾಡುಗಳನ್ನು ಶಿಫಾರಸ್ಸು ಮಾಡಲು ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗಕ್ಕೆ ಕಳುಹಿಸತಕ್ಕದ್ದು.

**10. ನಿಯಮಗಳ ರಚನಾಧಿಕಾರ.-** (1) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ರಾಜ್ಯ ಸರ್ಕಾರವು ಪೂರ್ವ ಪ್ರಕಟಣೆಯ ತರುವಾಯ, ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ನಿರ್ದಿಷ್ಟವಾಗಿ ಮತ್ತು ಮೇಲಿನ ಅಧಿಕಾರಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಈ ಕೆಳಗಿನ ಎಲ್ಲಾ ಅಥವಾ ಯಾವುದೇ ವಿಷಯಗಳಿಗೆ ಅಂಥ ನಿಯಮಗಳನ್ನು ಉಪಬಂಧಿಸಬಹುದು, ಅವುಗಳೆಂದರೆ: -

(ಎ) ಸರ್ಕಾರಿ ಸೇವೆಯ ಉದ್ದೇಶಗಳಿಗಾಗಿ ಅನುಸೂಚಿತ ಜಾತಿಗಳಿಗೆ ಸಂಬಂಧಿಸಿದಂತೆ ರೋಸ್ಟರ್ ಬಿಂದುಗಳನ್ನು ನಿಗದಿಪಡಿಸುವುದು ಅಥವಾ ಹೊಂದಾಣಿಕೆ ಮಾಡಿಕೊಳ್ಳುವುದು;

(ಬಿ) 4ನೇ ಪ್ರಕರಣದ ಅನುಪಾಲನೆಗಾಗಿ ಅರ್ಹ ವ್ಯಕ್ತಿಗಳು ಲಭ್ಯವಿಲ್ಲದ ಸಂದರ್ಭದಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ; ಮತ್ತು

(ಸಿ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮ ಅಥವಾ ಅಧಿಸೂಚನೆಯನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚಿನ ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವ ತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನಗಳ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮೊದಲು ಆ ನಿಯಮ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಉಭಯ ಸದನಗಳೂ ಒಪ್ಪಿದರೆ ಅಥವಾ ಆ ನಿಯಮ ಅಥವಾ ಅಧಿಸೂಚನೆಯ ಮಾಡಕೂಡದೆಂದು ಉಭಯ ಸದನಗಳೂ ಒಪ್ಪಿದರೆ, ಆ ನಿಯಮ ಅಥವಾ ಅಧಿಸೂಚನೆಯ ಆ ಮಾರ್ಪಾಟನ್ನು ಅಥವಾ ರದ್ದತಿಯನ್ನು ಅಧಿಸೂಚಿಸಿದ ದಿನಾಂಕದಿಂದ ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಸಂದರ್ಭಾನುಸಾರವಾಗಿ ಯಾವುದೇ ಪರಿಣಾಮ ಹೊಂದಿರತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಆ ನಿಯಮ ಅಥವಾ ಅಧಿಸೂಚನೆಯ ಅಡಿಯಲ್ಲಿ ಹಿಂದೆ ಮಾಡಿದ ಯಾವುದೇ ಕೃತ್ಯದ ಮಾನ್ಯತೆಗೆ ಬಾಧಕವಾಗತಕ್ಕದ್ದಲ್ಲ.

**11. ತೊಂದರೆಗಳನ್ನು ನಿವಾರಿಸುವ ಅಧಿಕಾರ.-** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ, ಯಾವುದೇ ತೊಂದರೆ ಉದ್ಭವಿಸಿದರೆ, ಆ ತೊಂದರೆಯ ನಿವಾರಣೆಗಾಗಿ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದ ತಾನು ಅವಶ್ಯಕ ಮತ್ತು ಯುಕ್ತವೆಂದು ಅಭಿಪ್ರಾಯಪಡುವಂಥ ಉಪಬಂಧಗಳನ್ನು ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ ಮಾಡಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳ ಅವಧಿಯ ಮುಕ್ತಾಯದ ತರುವಾಯ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಆದೇಶವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೇ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯದ ಅನುಸೂಚಿತ ಜಾತಿಗಳ ವಿವಿಧ ಉಪ-ಗುಂಪುಗಳಲ್ಲಿ ಅನುಸೂಚಿತ ಜಾತಿಗಳ ಉಪ-ವರ್ಗೀಕರಣದ ಕುರಿತು ನಿರ್ದಿಷ್ಟ ಶಿಫಾರಸ್ಸುಗಳನ್ನು ಸೂಚಿಸಲು ನಿವೃತ್ತ ನ್ಯಾಯಮೂರ್ತಿ ಶ್ರೀ ಎಚ್.ಎನ್. ನಾಗಮೋಹನ್ ದಾಸ್ ಅವರನ್ನೊಳಗೊಂಡ ಏಕವ್ಯಕ್ತಿ ಆಯೋಗವನ್ನು ಸರ್ಕಾರದ ಆದೇಶ ಸಂ: SWD/SLP/8-2024 (P-1), ದಿನಾಂಕ:12.11.2024 ಮತ್ತು 03.12.2024ರ ಮೂಲಕ ರಚಿಸಿದ್ದು, ಸದರಿ ಆಯೋಗವು 04.08.2025 ರಂದು ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿತು. ಮೀಸಲಾತಿ ಪ್ರಯೋಜನಗಳ ನ್ಯಾಯಯುತ ಮತ್ತು ಸಮಾನ ಹಂಚಿಕೆಯನ್ನು ಖಚಿತಪಡಿಸಿಕೊಳ್ಳಲು, ಅನುಸೂಚಿತ ಜಾತಿಗಳ ನಡುವಣ ಉಪ-ವರ್ಗೀಕರಣವನ್ನು ಅನುಷ್ಠಾನಗೊಳಿಸುವುದಕ್ಕಾಗಿ ಸದರಿ ಆಯೋಗವು ಮಾಡಿರುವ ಶಿಫಾರಸ್ಸುಗಳನ್ನು ಮಾರ್ಪಾಡಿನೊಂದಿಗೆ ಸರ್ಕಾರವು ಅನುಮೋದಿಸಿದೆ ಹಾಗೂ 17% ಮೀಸಲಾತಿಯ ಪಾಲಿನೊಂದಿಗೆ ಉಪ-ಪ್ರವರ್ಗೀಕರಣಗೊಳಿಸಲಾದ 101 ಅನುಸೂಚಿತ ಜಾತಿಗಳು ಈ ಮುಂದಿನಂತಿವೆ:

| ಪ್ರವರ್ಗದ ಹೆಸರು | ಉದ್ದೇಶಿತ ಶೇಕಡವಾರು ಮೀಸಲಾತಿ |
|---|---|
| ಪ್ರವರ್ಗ – ಎ (16 ಜಾತಿಗಳು) | 6% |
| ಪ್ರವರ್ಗ – ಬಿ (19 ಜಾತಿಗಳು) | 6% |
| ಪ್ರವರ್ಗ – ಸಿ (63 ಜಾತಿಗಳು) | 5% |
| ಒಟ್ಟು (98 ಜಾತಿಗಳು) | 17% |

ಮತ್ತು ಪ್ರವರ್ಗೀಕರಣದಿಂದ ಹೊರತಾಗಿರುವ ಮೂರು ಅನುಸೂಚಿತ ಜಾತಿಗಳಿದ್ದು, ಅವುಗಳೆಂದರೆ,:-

| ಕ್ರ. ಸಂ | ಜಾತಿಯ ಸಂಕೇತ | ಜಾತಿಯ ಹೆಸರು |
|---|---|---|
| 1 | 01 | ಆದಿ ಆಂಧ್ರ |
| 2 | 02 | ಆದಿ ದ್ರಾವಿಡ |
| 3 | 03 | ಆದಿ ಕರ್ನಾಟಕ |

ಹಾಗೂ, ಎ ಮತ್ತು ಬಿ ಪ್ರವರ್ಗಗಳಲ್ಲಿ ಉಲ್ಲೇಖಿಸದಿರುವ ಆದರೆ ಸಂವಿಧಾನ (ಅನುಸೂಚಿತ ಜಾತಿಗಳ) ಆದೇಶ, 1950ರಡಿ ಪಟ್ಟಿ ಮಾಡಲಾದ ಮತ್ತು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದವುಗಳೂ ಸಹ, ಸರ್ಕಾರದ ಸುತ್ತೋಲೆ ಸಂಖ್ಯೆ. ಎಸ್‌ಡಬ್ಲೂಡಿ 8 ಎಸ್‌ಎಲ್‌ಪಿ 2024 (ಪಿ-5) ದಿನಾಂಕ: 08.10.2025 ಮತ್ತು 09.10.2025ರಲ್ಲಿ ನಿರ್ದಿಷ್ಟಪಡಿಸಲಾದ ಜಾತಿ ಪ್ರಮಾಣಪತ್ರದ ಆಧಾರದ ಮೇಲೆ ಪ್ರವರ್ಗ–ಎ ಅಥವಾ ಪ್ರವರ್ಗ–ಬಿ ಇವುಗಳಡಿ ಮೀಸಲಾತಿಗಾಗಿ ಆಯ್ಕೆ (opt) ಮಾಡಿಕೊಳ್ಳಲು ಅರ್ಹರಾಗಿರತಕ್ಕದ್ದು.

ಆದ್ದರಿಂದ ರಾಜ್ಯ ಸರ್ಕಾರವು ಅನುಸೂಚಿತ ಜಾತಿಗಳ ಉಪ-ವರ್ಗೀಕರಣದ ಸದರಿ ಸರ್ಕಾರಿ ಆದೇಶಗಳು ಮತ್ತು ಸುತ್ತೋಲೆಗಳಿಗೆ ಕಾನೂನುಬದ್ಧತೆಯನ್ನು ನೀಡಲು ನಿರ್ಧರಿಸಿದೆ.

ಆದ್ದರಿಂದ ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಈ ಹಂತದಲ್ಲಿ ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತು ಜ್ಞಾಪನ ಪತ್ರ**

| | |
|---|---|
| **ಖಂಡ- 10** | ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನೆಯ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿರುತ್ತದೆ.

**ಡಾ. ಹೆಚ್.ಸಿ ಮಹದೇವಪ್ಪ**
ಸಮಾಜ ಕಲ್ಯಾಣ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

**THE KARNATAKA SCHEDULED CASTES (SUB-CLASSIFICAION) BILL, 2025**
**(LA Bill No. 89 of 2025)**

A Bill to provide for sub-classification among the Scheduled Castes in the State of Karnataka to ensure their unified and uniform progress in education and employment.

Whereas, in the State of Karnataka there are one hundred and one (101) Scheduled Castes listed under the Scheduled Castes category and the State Government extends a 17% reservation in Public sector employment and Educational Institutions to these communities. In accordance with Article 46 of the Directive Principles of State Policy (Part IV) of the Constitution of India, the State is committed to protecting the interests of Scheduled Castes and to provide Social Justice and prevention of exploitation, and fostering their overall development. Additionally, as enshrined in Article 38(2) of the Directive Principles, the State endeavours to eliminate inequalities in status, facilities, and opportunities, not only among individuals but also among groups residing in different regions and engaged in diverse vocations.

And whereas, the Constitutional mandate upholds social justice and equality of opportunity, as reflected in the Preamble and Fundamental Rights, particularly the Right to Equality (Articles 14 to 16), in conjunction with Articles 38, 39, 41, and 46. These provisions emphasize protective discrimination to minimize inequalities and uplift socially and educationally backward communities, including Scheduled Castes. To achieve these constitutional goals

and to ensure collective progress, the Government of Karnataka is committed to the fair and equitable distribution of reservation benefits among all Scheduled Castes, thereby ensuring their equal and fair access to opportunities in both education and public employment;

And whereas, in this context, the Hon'ble Supreme Court consisting of seven Judges has pronounced its judgment in W.P. Civil Appeal No.2317 of 2011 combined with other petitions including W.P.(C) No.562 of 2022, Dated. 01.08.2024 regarding Sub Classification within the Scheduled Castes. Out of seven Judges bench, six Judges opined that the validity of sub-classification within Scheduled Castes has been held to be constitutionally permissible. In pursuant to the above Judgement, the Government of Karnataka constituted a One-Man Commission with retired Justice Sri H.N. Naga Mohan Das, to suggest specific recommendations on sub-classification of Scheduled Castes among the various sub-groups of Scheduled Castes in the State of Karnataka vide GO. SWD/SLP/8-2024 (P-1), dated:12.11.2024 and 03.12.2024 and the said Commission submitted its report to the Government on 04.08.2025. The Government have approved the recommendations of said commission with modification to implement the sub-classification among the Scheduled Castes for ensuring a fair and equitable distribution of reservation benefits;

And whereas, the following are the categorisation of one hundred and one (101) Scheduled Castes and their proposed percentage of reservation:

| **Name of the Category** | **Proposed share in percentage** |
|---|---|
| Category –A (16 Castes) | 6% |
| Category –B (19 Castes) | 6% |
| Category –C (63 Castes) | 5% |
| **Total (98 Castes)** | **17%** |

And whereas the three non-categorised Scheduled castes, namely:-

| **SL.NO** | **Caste Code** | **Name of the Caste** |
|---|---|---|
| 1 | 01 | Adi Andhra |
| 2 | 02 | Adi Dravida |
| 3 | 03 | Adi Karnataka |

and not mentioned in the categories of A and B but listed under the Constitution (Scheduled Castes) Order, 1950 and amended from time to time shall also be eligible to opt for reservation under Category–A or Category–B based on caste certificate as specified in the Government Circular No. SWD 8 SLP 2024(P-5) dated 08.10.2025 and 09.10.2025.

Be it enacted by the Karnataka State Legislature in the seventy sixth year of the Republic of India as follows:-

**1. Short title and Commencement.-** (1) This Act may be called the Karnataka Scheduled Castes (Sub-Classification) Act, 2025.

(2) All the provision of this Act shall deemed to have come into force with effect from 25th day of August 2025 except the provisos in section 3 under the heading Category-C shall come into force at once.

**2. Definitions.- (**1) In this Act unless the context otherwise requires,-

(a) "Appointment" means, appointment through direct recruitment.

(b) "Backlog vacancies" means and includes unfilled vacancies which were unfilled and carried forward from previous recruitment

(c) "Educational Institutions" means,-

(i) Any school, college or other educational institution maintained by the State or receiving aid out of the State funds or University established by law; or

(ii) any institute or training centre recognised or approved by the Government:

with the object of preparing, training or guiding its students for any certificate, decree or diploma or other academic distinctions granted or conferred by any University or authority established or approved in this behalf by the Government ;

(d) "Government" means the State Government of Karnataka;

(e) "Prescribed" means prescribed by the rules made under this Act;

(f) "Public Service" means a civil service in any office or establishment of,-

(i) the Government;

(ii) a local authority,-

(a) rural Local Authorities established under the Karnataka Grama Swaraj and Panchayat Raj Act, 1993;

(b) urban Local Authorities established under the Karnataka Municipalities Act, 1964, the Karnataka Municipal Corporations Act,1976 and the Greater Bengaluru Governance Act, 2024;

(iii) a corporation or under taking wholly owned or controlled by the Government;

(iv) a corporate statutory body established by the State Government under any law for the time being in-force;

(v) an educational institutions;

(vi) a Government company established by the State Government under the provisions of the Companies Act, 2013(Central Act 18 of 2013);

(vii) any other body or Authority established by the State Government under any law for the time being in force;

(viii) a Co-operative society registered or deemed to have been registered under the Karnataka Co-operative Societies Act, 1959 (Karnataka Act 11 of 1959); and

(g) "Scheduled Castes" shall have the same meaning assigned to it in clause (24) of Article 366 of the Constitution of India read with the Constitution (Scheduled Castes) Order, 1950 made under Article 341 of the Constitution of India;

(2) All other words and expressions used but not defined in this Act shall have the same meaning as assigned to them in the Karnataka General Clauses

Act,1899 (Karnataka Act 03 of 1899) or other relevant Act for the time being in force.

**3. Sub-classification.-** In order to ensure, social justice and equality of opportunity and to ensure fair, just, reasonable and equitable enjoyment of benefits of the reservation by all the Scheduled Castes with respect to the State of Karnataka, the State Government have sub-classified the one hundred and one (101) Scheduled caste into three categories which are identified based on inter-se, backwardness, social cohesion and population. The percentage of reservation for the three categories shall be at the rate prescribed in clauses (i),(ii) and (iii) as mentioned below of this section:

**Provided that the three non-categorised Scheduled castes, namely:-**

| SL.NO | Caste Code | Name of the Caste |
|---|---|---|
| 1 | 01 | Adi Andhra |
| 2 | 02 | Adi Dravida |
| 3 | 03 | Adi Karnataka |

and not mentioned in the categories of A and B but listed under the Constitution (Scheduled Castes) Order, 1950 and amended from time to time shall also be eligible to opt for reservation under Category–A or Category–B based on caste certificate as specified in the Government Circular No. SWD 8 SLP 2024(P-5) dated 08.10.2025 and 09.10.2025.

Provided further that, the reservation as specified under this section to the three categories shall be subject to the availability of eligible candidates.

(i) Six percent of the posts or seats so reserved under Sub-classification for the Scheduled Castes shall be reserved to the persons belonging to the following Scheduled Castes which shall be referred to as Scheduled Castes (Category-A) namely:-

**CATEGORY-A**

| SL.NO | Caste Code | Name of the Caste | Percentage of reservation allotted to category-A |
|---|---|---|---|
| 1 | 22 | Bhambi,Bhambhi,Asadaru,Asodi, Chamadia,Chamar,Chambhar,Chamgar, Haralayya,Harali,Khalpa,Machigor,Mochigar Madar,Madig,Mochi,Muchi,TeleguMochi,Kamati Mochi,Ranigar, Rohidas,Rohit, Samgar | 6% |
| 2 | 28 | Chandala | |
| 3 | 32 | Dhor,Kakkayya,Kankayya | |
| 4 | 40 | Halsar,Haslar,Hulasvar,Halasvar | |
| 5 | 42 | Hasla | |
| 6 | 48 | Kadaiyan | |
| 7 | 50 | Kepmaris | |
| 8 | 51 | Kolupulvandlu | |

| | | | |
|---|---|---|---|
| 9 | 56 | Kudumban | |
| 10 | 61 | Madiga | |
| 11 | 72 | Mang,Matang,Minimadig | |
| 12 | 76 | Mavilan | |
| 13 | 88 | Panchama | |
| 14 | 89 | Panniandi | |
| 15 | 93 | Samagara | |
| 16 | 94 | Samban | |

(ii) Six percent of the posts or seats so reserved under the Sub-categorisation for the Scheduled Castes shall be reserved to the persons belonging to the following Scheduled Castes which shall be referred to as Scheduled Castes (Category-B) namely:-

**CATEGORY-B**

| SL.NO | Caste Code | Name of the Caste | Percentage of reservation allotted to category-B |
|---|---|---|---|
| 1 | 7 | Anamuk | 6% |
| 2 | 8 | Aray Mala | |
| 3 | 10 | Arwa Mala | |
| 4 | 15 | Balagai | |
| 5 | 27 | Chalavadi,Chalvadi,Channayya | |
| 6 | 86 | Pallan | |
| 7 | 44 | Holaya,Holer,Holeya | |
| 8 | 63 | Mahyavanshi,Dhed,Vankar, MaruVankar | |
| 9 | 65 | Mala | |
| 10 | 67 | Mala Hannai | |
| 11 | 68 | Mala Jangam | |
| 12 | 69 | Mala Masti | |
| 13 | 70 | Mala Sale, Netkani | |
| 14 | 62 | Mahar,Taral,DheguMegu | |
| 15 | 78 | Moger | |
| 16 | 80 | Mundala | |
| 17 | 90 | Paraiyan, Paraya | |
| 18 | 92 | Raneyar | |
| 19 | 101 | Valluvan | |

(iii) Five percent of the posts or seats so reserved under the Sub-Categorisation for the Scheduled Castes shall be reserved to the persons belonging to the following Scheduled Castes which shall be referred to as Scheduled Castes (Category-C) namely:-

## CATEGORY-C

| SL.NO | Caste Code | Name of the Caste | Percentage of reservation allotted to category-C |
|---|---|---|---|
| 1. | 4 | Adiya (in Coorg district) | |
| 2. | 5 | Ager | |
| 3. | 6 | Ajila | |
| 4. | 9 | Arunthathiyar | |
| 5. | 11 | Baira | |
| 6. | 12 | Bakad | |
| 7. | 14 | Bakuda | |
| 8. | 16 | Bandi | |
| 9. | 13 | Bant (in Belgaum, Bijapur, Dharwar and North Kanara districts) | |
| 10. | 17 | Banjara, Lambani, Lambada, Lambadi, Lamani, Sugali, Sukali | |
| 11. | 18 | Bathada | |
| 12. | 19 | BudgaJangam,BedaJangam, | |
| 13. | 20 | Bellara | |
| 14. | 21 | Bhangi, ,Mehtar,Olgana,Rukhi,Malkana Halalkhor ,Lalbegi ,Balmiki,Korar,Zadmalli | |
| 15. | 23 | Bhovi,Od,Odde,Vaddar,Waddar,Voddar,Woddar, Bovi (Non-Besta),Kalluvaddar,Mannuvaddar | |
| 16. | 24 | Bindla | |
| 17. | 25 | Byagara | |
| 18. | 26 | Chakkiliyan | |
| 19. | 29 | ChennaDasar ,HolayaDasar | |
| 20. | 30 | Dakkal ,Dokkalwar | |
| 21. | 31 | Dakkaliga | 5% |
| 22. | 33 | Dom, Dombara ,Paidi ,Pano | |
| 23. | 34 | Ellamalwar,Yellammalawandlu | |
| 24. | 35 | Ganti Chores | |
| 25. | 36 | Garoda,Garo | |
| 26. | 37 | Godda | |
| 27. | 38 | Gosangi | |
| 28. | 39 | Halleer | |
| 29. | 41 | Handi Jogis | |
| 30. | 43 | Holar,Valhar | |
| 31. | 45 | Holeya Dasari | |
| 32. | 46 | Jaggali | |
| 33. | 47 | Jambuvulu | |
| 34. | 49 | Kalladi | |

| | | | |
|---|---|---|---|
| 35. | 52 | Koosa | |
| 36. | 53 | Koracha,Korachar | |
| 37. | 54 | Korama,Korava,Koravar | |
| 38. | 55 | Kotegar, Metri | |
| 39. | 57 | Kuravan | |
| 40. | 58 | Lingader | |
| 41. | 59 | Machala | |
| 42. | 60 | Madari | |
| 43. | 64 | Maila | |
| 44. | 66 | Mala Dasari | |
| 45. | 71 | Mala Sanyasi | |
| 46. | 73 | Mang Garudi,MangGarodi | |
| 47. | 74 | Manne | |
| 48. | 75 | Masthi | |
| 49. | 77 | Meghval, Menghvar | |
| 50. | 79 | Mukri | |
| 51. | 81 | Nadia,Hadi | |
| 52. | 82 | Nalkadaya | |
| 53. | 83 | Nalakeyava | |
| 54. | 84 | Nayadi | |
| 55. | 85 | Pale | |
| 56. | 87 | Pambada | |
| 57. | 91 | Paravan | |
| 58. | 95 | Sapari | |
| 59. | 96 | Sillekyathas | |
| 60. | 97 | Sindhollu,Chindollu | |
| 61. | 98 | Sudugadu Siddha | |
| 62. | 99 | Thoti | |
| 63. | 100 | Tirgar,Tirbanda | |

Provided that, in case of Category-C list of the Scheduled Castes, for the 59 castes other than those mentioned at Sl. No 10, 15, 36 and 37 of the table above (i.e Caste Code 17, 23, 53 and 54), at least one out of every five posts or seats shall be reserved within Category-C.

Provided further that, if no eligible candidate is available under these 59 castes in Category-C, such posts or seats shall be filled by the above said four castes (i.e Sl. No 10, 15, 36 and 37).

**4. Backlog Vacancies.-** The percentage of reservation provided in section 3 shall be applicable for filling up of backlog vacancies pertaining to public appointments.

**5. Reservations not to be affected.-** Nothing contained in this Act, shall apply to any appointment to a post or service in any Department of the Central Government or any Corporation or undertaking owned or controlled by it or to any educational institutions belonging to or under the control of the Central Government or their entity.

**6. Protection of action taken in good faith.-** No suit, prosecution or other legal proceedings shall laid against any authority or persons or anything done or perforated to have been in good faith in pursuance of the provisions of this Act or rules made thereunder.

**7. Roster points.-** (1) Fixation or adjustment of roster points in respect of Scheduled Castes in both vertical and horizontal reservation for the purpose of appointments in State Civil services and other establishments of the Local Authority or Corporation or other body.

(2) Any other matter as may be prescribed.

(3) Every order made under this section shall as soon as may, after it is made, be laid before each House of the State Legislature.

**8. Savings.-** (1) Save as otherwise provided in this Act or any other law for the time being in force the Government orders in relation to the reservation of Scheduled Castes in the public service or educational institutions shall be continued.

(2) Government order No.SWD 8 SLP 2024 dated 25.08.2025 and circular No.SWD 8 SLP 2024(P-5)dated 08.10.2025 and 09.10.2025 in relation to reservation and sub-classification of Scheduled Castes issued before the date of commencement of this Act and in force on the date of commencement of this Act, to the extent they are not inconsistent with the provisions of this Act, shall continue to be in force and effective as if they are made or issued under the corresponding provisions of this Act unless and until superseded by anything done or any action taken or any order, circular made under this Act.

**9. Modification in the reservation percentage of sub-classification.-** On receipt of new data/information by the Government it shall refer to the Karnataka State Commission for the Scheduled Castes and the Scheduled Tribes to analyse the data and recommend the necessary modification if required to the members of the Scheduled Castes.

**10. Power to make rules.-** (1) The State Government may, after previous publication by notification, make rules to carry out the purposes of this Act.

(2) In particular and without prejudice to the generality of the foregoing powers, such rules may provide for all or any of the following matters, namely:-

(a) Fixation or adjustment of roster points in respect of Scheduled Castes for the purposes of public service;

(b) Procedure to be followed in case of non-availability of eligible persons for compliance with section 4; and

(c) Any other matter which has to be or may be prescribed.

(3) Every rule or notification made under this Act shall be laid as soon as may be after it is made, before each House of the State Legislature while it is in session, for a total period of thirty days which may be comprised in one session or in two or more successive sessions and if before the expiry of the session immediately following the session or the successive sessions aforesaid, both Houses agree in making any modification in the rule or notification or both Houses agree that the rule or notification should not be made, the rule or notification shall, from the date on which the modification or annulment is notified have effect only in such modified form or be of no effect as the case may be; so, however, that any such modification or annulment shall be without, prejudice to the validity of anything previously done under that rule or notification.

**11. Power to remove difficulties.-** (1) If any difficulty arises in giving effect to the provisions of this Act, the Government may by order published in the Official Gazette make provisions not inconsistent with the provisions of this Act as appear to it be necessary or expedient for removing the difficulty:

Provided that no such order shall be made after the expiry of a period of two years from the date of commencement of this Act.

(2) Every order made under this section shall as soon as may, after it is made, be laid before each House of State Legislature.

## STATEMENT OF OBJECTS AND REASONS

The Government of Karnataka constituted a One-Man Commission with retired Justice Sri H.N. Naga Mohan Das, to suggest specific recommendations on sub-classification of Scheduled Castes among the various sub-groups of Scheduled Castes in the State of Karnataka vide GO. SWD/SLP/8-2024 (P-1), dated:12.11.2024 and 03.12.2024 and the said Commission submitted its report to the Government on 04.08.2025. The Government have approved the recommendations of said commission with modification to implement the sub-classification among the Scheduled Castes for ensuring a fair and equitable distribution of reservation benefits and issued Government Order No. SWD 08 SLP 2024, dated: 25.08.2025 and Circular No. No. SWD 08 SLP 2024 (P-5), dated: 08.10.2025 and sub-categorised 101 Scheduled Castes with share of 17% of reservation as below,-

| **Name of the Category** | **Proposed share in percentage** |
|---|---|
| Category –A (16 Castes) | 6% |
| Category –B (19 Castes) | 6% |
| Category –C (63 Castes) | 5% |
| **Total (98 Castes)** | **17%** |

The three non-categorised Scheduled castes, namely:-

| SL.NO | Caste Code | Name of the Caste |
|---|---|---|
| 1 | 01 | Adi Andhra |
| 2 | 02 | Adi Dravida |
| 3 | 03 | Adi Karnataka |

and not mentioned in the categories of A and B but listed under the Constitution (Scheduled Castes) Order, 1950 and amended from time to time shall also be eligible to opt for reservation under Category–A or Category–B based on caste certificate as specified in the Government Circular No. SWD 8 SLP 2024(P-5) dated 08.10.2025 and 09.10.2025.

Therefore the State Government decided to give legality to the said Government Orders and circulars and sub-classification of the Scheduled Castes.

Hence, the Bill.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



## FINANCIAL MEMORANDUM

There is no extra expenditure involved in the legislative measure at this stage.

## MEMORANDUM REGARDING DELEGATED LEGISLATION

| | |
|---|---|
| **Clause :10** | Empowers the State Government to make rules to carry out the purposes of the Act. |

The proposed delegation of legislative power is normal in character.

**Dr. H.C. MAHADEVAPPA**
Minister for Social Welfare

**M.K. VISHALAKSHI**
Secretary
Karnataka Legislative Assembly

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH